# ಶುಭವಾರ್ತೆ

ಉಚಿತ ಹಂಚಿಕೆ

ಸಂಪುಟ 2 ಸಂಚಿಕೆ 13


ಯೇಸು ಹೇಳಿದ್ದು—ಒಬ್ಬನು ನೀರಿನಿಂದಲೂ ಆತ್ಮದಿಂದಲೂ
ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು

—ಯೋಹಾನ 3 : 5.

## ಜೀವಿತದ ಮಾರ್ಗ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ದೀಕ್ಷಾಸ್ನಾನ :

ಎಲ್ಲಾ ಜನಾಂಗದವರಿಗೆ ಸುವಾರ್ತೆಯು ಸಾರಲ್ಪಡಬೇಕೆಂಬ ಕ್ರಿಸ್ತನ ಆಜ್ಞೆಯೊಂದಿಗೆ, ನಂಬಿದವರಿಗೆ ದೀಕ್ಷಾಸ್ನಾನ ಮಾಡಿಸಿ ಎಂಬ ಕಟ್ಟಳೆಯೂ ಸೇರಿಸಲ್ಪಟ್ಟಿತ್ತು. ಅಪೋಸ್ತಲರ ಕೃತ್ಯಗಳು ಪುಸ್ತಕದಲ್ಲಿ ಓದುವಾಗ, ಸುವಾರ್ತೆಯನ್ನು ನಂಬಿದ ನಂತರ ಮತಾಂತರಿಗಳೆಲ್ಲರೂ ಈ ದೀಕ್ಷಾಸ್ನಾನದ ಕಟ್ಟಳೆಗೆ ವಿಧೇಯರಾಗಬೇಕಿತ್ತೆಂಬ ಸಂಗತಿಯನ್ನು ದೃಢಪಡಿಸುತ್ತದೆ. "ಸಹೋದರರೇ, ನಾವೇನು ಮಾಡಬೇಕು ?" ಎಂಬುದೇ ಪೇತ್ರನು ಯೆಹೂದ್ಯರಿಗೆ ರಕ್ಷಣೆಯ ಬಾಗಿಲನ್ನು ತೆರೆದಾಗ ಆತನ ಸಂದೇಶವನ್ನು ಕೇಳಿದ ಸಮೂಹದವರ ಪ್ರಶ್ನೆಯಾಗಿತ್ತು. "ನಿಮ್ಮ ಪಾಪಗಳು ಪರಿಹಾರವಾಗುವುದಕ್ಕೆ ಮಾನಸಾಂತರಪಟ್ಟು ನಿಮ್ಮಲ್ಲಿ ಪ್ರತಿಯೊಬ್ಬರೂ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ......... ಅವನ ಮಾತಿಗೆ ಒಪ್ಪಿದವರು (ಅವನ ಮಾತನ್ನು ಸಂತೋಷದಿಂದ ಸ್ವೀಕರಿಸಿದವರು) ದೀಕ್ಷಾಸ್ನಾನ ಮಾಡಿಸಿಕೊಂಡರು." (ಅ.ಕೃ. 2:37; 38, 41)

ಕರ್ತನು ಅಪ್ಪಣೆ ಕೊಟ್ಟ ಪ್ರಕಾರ ಸುವಾರ್ತಾ ಸಾರುವಿಕೆಯು ಯೂದಾಯದ ಆಚೆಗೂ ವಿಸ್ತರಿಸಿದ್ದಾಗ, ಫಿಲಿಪ್ಪನು ಸಮಾರ್ಯದವರಿಗೆ "ಕ್ರಿಸ್ತನನ್ನು" ಸಾರಿದನು. ತತ್ಪರಿಣಾಮವಾಗಿ "ಗುಂಪಾಗಿ ಕೂಡಿದ ಜನರು ಅವನು ಮಾಡಿದ ಸೂಚಕ ಕಾರ್ಯಗಳನ್ನು ನೋಡಿ ಅವನು ಹೇಳಿದ ಸಂಗತಿಗಳಿಗೆ ಏಕಮನಸ್ಸಾಗಿ ಲಕ್ಷ್ಯಕೊಟ್ಟರು.........

(3ನೇ ಪುಟ ನೋಡಿ)

## ಓದುಗರಿಗೆ

"ಶುಭವಾರ್ತೆ" ಇದೀಗ 12 ಸಂಚಿಕೆಗಳ ಪ್ರಕಟಣೆಯನ್ನು ಪೂರ್ಣಗೊಳಿಸಿ, ಎರಡನೆಯ ಸಂಪುಟಕ್ಕೆ ಕಾಲಿಟ್ಟಿದೆ. ನಮ್ಮ ತಂದೆಯಾದ ದೇವರು ಕರ್ತನಾದ ಯೇಸುಕ್ರಿಸ್ತನ ಮೂಲಕ ತೋರಿಸಿದ ಕೃಪೆಯಿಂದಲೇ ಇದು ಸಾಧ್ಯವಾಯಿತು. ಸಹೃದಯರಾದ ಓದುಗರು ಈ ಒಂದು ವರ್ಷದ ಕಾಲದಲ್ಲಿ "ಶುಭವಾರ್ತೆ"ಯ ಪುಟಗಳಲ್ಲಿ ಪ್ರಕಟಗೊಂಡ ವಿಷಯಗಳಲ್ಲಿನ ಸತ್ಯವನ್ನು ಮುಂದಿನ ಜೀವಿತಕ್ಕೆ ಅರ್ಹರಾಗಲು ಈಗಿನ ಜೀವಿತದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಾರೆಂದು ನಂಬಿದ್ದೇನೆ. ಇದೇ ರೀತಿ ಇನ್ನು ಮುಂದೆಯೂ ನಮ್ಮ ಕರ್ತನೂ ರಕ್ಷಕನೂ ಆದ ಕ್ರಿಸ್ತ ಯೇಸುವಿನ ಮೂಲಕ ತಂದೆಯಾದ ದೇವರ ಆಶೀರ್ವಾದವನ್ನು ಬೇಡಿ ನಮ್ಮ ಈ ತಾತ್ಕಾಲಿಕ ಜೀವಿತವನ್ನು ಮುಂದಿನ ನಿತ್ಯ ಜೀವಿತಕ್ಕೆ ಸಿದ್ಧಪಡಿಸಿಕೊಳ್ಳೋಣ.

ಭಾ. ಚಂದುದಾಸ್

## ಮಕ್ಕಳ ದೀಪ-4 (ಹಿಂದಿನ ಸಂಚಿಕೆಗೆ ಉತ್ತರ)

1. ಪಕ್ಕೆಲುಬಿನಿಂದ. 2. ಹವ್ವ. 3. ತಿನ್ನಬಹುದಿತ್ತು. 4. ತಿನ್ನಬಾರದಿತ್ತು/ಸಾಯುವರು. 5. ಸರ್ಪ. 6. ಅವಿಧೇಯ/ಹೊರಕ್ಕೆ ಅಟ್ಟಿದನು. 7. ಕಾಯಿನನು. 8. ಹೇಬೇಲನು. 9. ಕಾಯಿನನು. 10. ಸೇಥನು.


ಪ್ರಕಾಶಕರು :

ದಿ ಕ್ರಿಸ್ಟಡೆಲ್ಫಿಯನ್ಸ್,
23/4, ಬೆನ್ಸನ್ ರಸ್ತೆ, ಬೆಂಗಳೂರು–560046.
(ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ)

ಸ್ಥಳೀಯ ವಿಳಾಸಗಳು:

ದಿ ಕ್ರಿಸ್ಟಡೆಲ್ಫಿಯನ್ಸ್,
ಕೇರ್ ಆಫ್ ಸಿಟಿ ಡ್ರಗ್ ಹೌಸ್,
ರಾಜೇಂದ್ರ ಪ್ರಸಾದ್ ರಸ್ತೆ,
ಮಂಡ್ಯ 571401, ಕರ್ನಾಟಕ.

ದಿ ಕ್ರಿಸ್ಟಡೆಲ್ಫಿಯನ್ಸ್,
ಜಿ. ಪಿ. ಓ. ಬಾಕ್ಸ್ 159,
ಹೈದರಾಬಾದ್–500001.

(1ನೇ ಪುಟದಿಂದ)
ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ, ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು." (ಅ. ಕೃ. 8:4-6, 12).

ಅಪೋಸ್ತಲರ ಕೃತ್ಯಗಳ ಪುಸ್ತಕದ ಅದೇ ಅಧ್ಯಾಯದಲ್ಲಿ ಐಥಿಯೋಪ್ಯದ ಮುತಾಂತರಿಯೊಬ್ಬನಿಗೆ ಫಿಲಿಪ್ಪನು ತಿಳಿಸಿದ ವಿಷಯಗಳನ್ನು ಬರೆದಿದೆ. ಕಂದಾಕೆಯೆಂಬ ರಾಣಿಯ ಈ ಅಧಿಕಾರಿಯು ಯೆರೂಸಲೇಮಿನಿಂದ ಸ್ವದೇಶಕ್ಕೆ ತನ್ನ ರಥದಲ್ಲಿ ಹಿಂದಿರುಗುತ್ತಿರುವಾಗ ಯೆಶಾಯನ ಗ್ರಂಥದ 53ನೇ ಅಧ್ಯಾಯವನ್ನು ಓದುತ್ತಿದ್ದನು. ಫಿಲಿಪ್ಪನು ಅವನನ್ನು "ನೀನು ಓದುತ್ತಿರುವುದು ತಿಳಿಯುತ್ತದೋ" ಎಂದು ಕೇಳಲು, ಆ ಮನುಷ್ಯನು ತನಗೆ ಮಾರ್ಗದರ್ಶನದ ಅವಶ್ಯಕತೆಯನ್ನು ಒಪ್ಪಿಕೊಂಡನು. ಫಿಲಿಪ್ಪನು ಅವನೊಂದಿಗೆ ಸೇರಿ, "ಅದೇ ವಚನವನ್ನು ಆಧಾರ ಮಾಡಿಕೊಂಡು, ಯೇಸುವಿನ ವಿಷಯವಾದ ಸುವಾರ್ತೆಯನ್ನು ಸಾರಿದನು." ವಾಕ್ಯವನ್ನು ಸರಿಯಾಗಿ ಅರ್ಥ ಮಾಡಿಕೊಂಡ ಆ ಕಂಚುಕಿಯು ದೀಕ್ಷಾಸ್ನಾನ ಹೊಂದಬೇಕೆಂದು ಅಪೇಕ್ಷೆಪಟ್ಟನು. ಫಿಲಿಪ್ಪನು ಅದು ಅಗತ್ಯವೆಂದು ಅವನಿಗೆ ಸ್ಪಷ್ಟವಾಗಿ ತಿಳಿಸಿರಬೇಕು. "ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿಗೆ ಬಂದರು. ಕಂಚುಕಿಯು ಆಗೋ ನೀರು. ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿ ಏನು ಎಂದು ಹೇಳಿದನು." (ವ. 36) ಅವನ ನಂಬಿಕೆಯಿಂದ ದೃಢಪಟ್ಟವನಾಗಿ ಫಿಲಿಪ್ಪನು ರಥವನ್ನು ನಿಲ್ಲಿಸಲು ಹೇಳಿ "ಫಿಲಿಪ್ಪನೂ ಕಂಚುಕಿಯೂ ಇಬ್ಬರೂ ನೀರಿನೊಳಗೆ ಇಳಿದರು; ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು." (ವ. 38).

ದಮಸ್ಕಕ್ಕೆ ಹೋಗುತ್ತಿರುವ ಮಾರ್ಗದಲ್ಲಿ, ಕರ್ತನ ಪ್ರಭೆಯಿಂದ ಪೌಲನು ಕುರುಡನಾದಾಗ, "ಕರ್ತನೇ ನಾನೇನು ಮಾಡಬೇಕೆನ್ನುತ್ತೀ ?" ಎಂದು ಕೇಳಲು ಮಾತ್ರ ಸಾಧ್ಯವಿತ್ತು. ಅವನು ಪಟ್ಟಣದೊಳಕ್ಕೆ ಹೋಗಬೇಕೆಂದೂ ಅಲ್ಲಿ ಅವನಿಗೆ ಉತ್ತರ ದೊರೆಯುತ್ತದೆಂದೂ ತಿಳಿಸಲ್ಪಟ್ಟಿತು. ಕರ್ತನ ಶಿಷ್ಯನಾದ ಅನನೀಯನೆಂಬುವನನ್ನು ಕರ್ತನು ಪೌಲನನ್ನು ಎದುರ್ಗೊಳ್ಳಲು ಕಳುಹಿಸುತ್ತಾನೆ. ಅವನು ಪೌಲನಿಗೆ, "ಸಹೋದರನಾದ ಪೌಲನೇ, ನೀನು ಬಂದ ದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಕರ್ತನಾದ ಯೇಸು ನಿನಗೆ ಕಣ್ಣು ಕಾಣಿಸುವಂತೆಯೂ ನೀನು ಪವಿತ್ರಾತ್ಮಭರಿತನಾಗುವಂತೆಯೂ ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಿದನು. ಕೂಡಲೇ ಅವನ ಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣು ಕಾಣಿಸಿದವು. ಅವನು ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡನು." (ಅ. ಕೃ. 9:17-18). ತನ್ನ ಪರಿವರ್ತನೆಯ ಬಗ್ಗೆ ಪೌಲನು ನಂತರ ತಿಳಿಸುತ್ತಾ ಅನನೀಯನು ತನಗೆ ಹೇಳಿದ ಮಾತುಗಳಲ್ಲಿಯೇ ಹೇಳುತ್ತಾನೆ; "ಈಗ ನೀನೇಕೆ ತಾವಕಾಶ ಮಾಡುತ್ತೀ ? ಎದ್ದು ಆತನ ಹೆಸರಿನಲ್ಲಿ ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು." (ಅ.ಕೃ. 22:16).

ಕೊರ್ನೇಲ್ಯನೆಂಬ ಶತಾಧಿಪತಿಯ ಬಗ್ಗೆ ಈಗಾಗಲೇ ತಿಳಿಸಿದೆ. ಈ ಭಕ್ತಿವಂತನಾದ ಮನುಷ್ಯನಿಗೆ ಸುವಾರ್ತೆಯನ್ನು ಸಾರುವುದರ ಮೂಲಕ ಪೇತ್ರನು ಅನ್ಯ ಜನಾಂಗದವರಿಗೆ ರಕ್ಷಣೆಯ ಮಾರ್ಗವನ್ನು ತೆರೆದನು. ಕೆಲವು ಯೆಹೂದ್ಯ ವಿಶ್ವಾಸಿಗಳು ಅವನ ಕಾರ್ಯಕ್ಕೆ ಆಕ್ಷೇಪಿಸಿದರೂ ಕೂಡ "ದೇವರು ಅನ್ಯ ಜನರಿಗೂ ಜೀವ ಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ" ಎಂಬುದನ್ನು ನಾವು ನೋಡಬಹುದು. (ಅ. ಕೃ. 11:18). ದೇವರು ಕೊರ್ನೇಲ್ಯನ ಮೇಲೆ ಪವಿತ್ರಾತ್ಮ ವರ ಕೊಡುವುದರ ಮೂಲಕ ತನ್ನ ಅಂಗೀಕಾರವನ್ನು ತೋರಿಸಿದನು. ಪೇತ್ರನು ಇದನ್ನು ನೋಡಿ, "ಇವರಿಗೆ ನೀರಿನ ದೀಕ್ಷಾಸ್ನಾನವಾಗದಂತೆ ಯಾರಾದರೂ ಅಡ್ಡಿ ಮಾಡಾರೆ" ಎಂದು ಹೇಳಿ ಅವರಿಗೆ, "ನೀವು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು." (ಅ. ಕೃ. 10:45, 48).

ಪೌಲನ ಸೇವೆಯು ಸುವಾರ್ತೆಯನ್ನು ನಂಬಿದ ಅನ್ಯ ಜನಾಂಗದವರೆಲ್ಲರೂ ದೀಕ್ಷಾಸ್ನಾನ ಹೊಂದಬೇಕೆಂಬುದನ್ನು ತೋರಿಸಿಕೊಟ್ಟಿತು. ಪೌಲನು ಹೇಳಿದ ಮಾತುಗಳಿಗೆ ಲಕ್ಷ್ಯ ಕೊಟ್ಟಾಗ ಲುದ್ಯಳೂ ಆಕೆಯ ಮನೆಯವರೂ ದೀಕ್ಷಾಸ್ನಾನ ಮಾಡಿಸಿಕೊಂಡರೆಂದು ನಾವು ಓದುತ್ತೇವೆ. (ಅ ಕೃ. 16:14, 15). ಫಿಲಿಪ್ಪಿನ ಆ ಸೆರೆಮನೆಯ ಯಜಮಾನನು, "ನಾನು ರಕ್ಷಣೆ ಹೊಂದುವುದಕ್ಕೆ ಏನು ಮಾಡಬೇಕು ?" ಎಂದು ಕೇಳಲು, "ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ ರಕ್ಷಣೆ ಹೊಂದುವರು." ಎಂಬ ಉತ್ತರ ದೊರಕಿತು. ಅವರು ಅವನಿಗೂ ಅವನ ಮನೆಯಲ್ಲಿದ್ದವರೆಲ್ಲರಿಗೂ ದೇವರ ವಾಕ್ಯವನ್ನು ತಿಳಿಸಿದರು. ಆಮೇಲೆ ಅವನು ರಾತ್ರಿಯ ಅದೇ ಗಳಿಗೆಯಲ್ಲಿ ಅವರನ್ನು ಕರೆದುಕೊಂಡು ಹೋಗಿ ಅವರ ಗಾಯಗಳನ್ನು ತೊಳೆದು, ಕೂಡಲೇ ತಾನು ತನ್ನವರೆಲ್ಲರ ಸಹಿತವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡನು." (ಅ.ಕೃ. 16:30-33) ಕೊರಿಂಥದಲ್ಲಿ ಪೌಲನ ಸಾರುವಿಕೆಯು ಪರಿವರ್ತನೆಯಲ್ಲಿ ನಿಜವಾದ ಕ್ರಮಕ್ಕೆ ಒಂದು ನಿದರ್ಶನವಾಗಿದೆ. "ಕೊರಿಂಥದವರಲ್ಲಿ ಅನೇಕರು ಕೇಳಿ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು" (ಅ ಕೃ. 18:8). ಈ ಮೂರು ಕೊಂಡಿಗಳು ಬೇರ್ಪಡೆಯಾಗುವಂಥವುಗಳಲ್ಲ— ಮನುಷ್ಯರು ತಿಳಿದುಕೊಳ್ಳಲು "ಕೇಳ"ಬೇಕು ; ಅವರು ನಂತರ "ನಂಬ"ಬೇಕು ; "ದೀಕ್ಷಾಸ್ನಾನ"ದಲ್ಲಿ ವಿಧೇಯತೆಯು ಹಿಂಬಾಲಿಸಬೇಕು.

## ದೀಕ್ಷಾಸ್ನಾನದ ಅರ್ಥ

ದೀಕ್ಷಾಸ್ನಾನವು ವಿಧೇಯತೆಯ ಒಂದು ಕಾರ್ಯವಾಗಿದ್ದು ತುಂಬಾ ಅರ್ಥವುಳ್ಳದ್ದಾಗಿದೆ. ಈ ಸಂಸ್ಕಾರದ ಅರ್ಥ ಹಾಗೂ ಪರಿಣಾಮಗಳ ಬಗ್ಗೆ ತೋರಿಸಿರುವ ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ದೀಕ್ಷಾಸ್ನಾನದ ರೀತಿ ಹಾಗೂ ಅದರ ಭಾವಾರ್ಥವನ್ನು ವಿಪುಲವಾಗಿ ಪ್ರದರ್ಶಿಸಲ್ಪಟ್ಟಿದೆ. 'ದೀಕ್ಷಾಸ್ನಾನ' ಪದದ (Baptism) ಮೂಲ ಪದದ (Baptizo) ಅರ್ಥವು "ಮುಳುಗಿಸಿ", "ಅದ್ದು"—ಎಂಬುದಾಗಿದ್ದು

ನೀರಿನಲ್ಲಿ ಸಂಪೂರ್ಣವಾಗಿ ಹೂಣಲ್ಪಡುವಿಕೆಯೇ ಆಗಿದೆ. ಈ ಕಾರಣದಿಂದಲೇ ಸ್ನಾನಿಕನಾದ ಯೋಹಾನನು ಯೊರ್ದಾನಿನ ಐನೋನ್ ಎಂಬ ಸ್ಥಳದಲ್ಲಿ ಸಾರುತ್ತಿದ್ದನು. "ಯಾಕೆಂದರೆ ಅಲ್ಲಿ ಬಹಳ ನೀರಿತ್ತು." (ಯೋಹಾನ 3:23), ಫಿಲಿಪ್ಪನು, ನಾವು ನೋಡಿದ ಹಾಗೆ, ಕಂಚುಕಿಯೊಡನೆ "ನೀರಿನೊಳಕ್ಕೆ ಹೋದನು."

ಅದರ ಭಾವಾರ್ಥದ ಬಗ್ಗೆ ಹೇಳುವುದಾದರೆ—ದೀಕ್ಷಾಸ್ನಾನವು ಕ್ರಿಸ್ತನ ಮರಣದೊಂದಿಗೆ ಪ್ರತ್ಯೇಕಿಸಲ್ಪಡದ ಹಾಗೆ ಸೇರಿಕೊಂಡಿದೆ—ಕರ್ತನ ಮರಣದೊಂದಿಗೆ ವಿಶ್ವಾಸಿಯನ್ನು ಗುರುತಿಸಲು ಅದು ಸಾಧ್ಯವಾಗಿದೆ. ರೋಮಿನಲ್ಲಿ ಕೆಲವರು ಬೋಧಿಸುತ್ತಿದ್ದ ತಪ್ಪನ್ನು ನಿರಾಕರಿಸುವಾಗ ಪೌಲನು ದೀಕ್ಷಾಸ್ನಾನವು ಏನನ್ನು ಸೂಚಿಸುತ್ತದೆಂಬುದನ್ನು ಪ್ರತಿಪಾದಿಸುತ್ತಾನೆ ಆದು ಪ್ರಚಲಿತವಾಗಿದ್ದ ಕೆಲವು ಸಿದ್ಧಾಂತಗಳಿಂದ ಪ್ರಭಾವಿತರಾದ ಈ ತಪ್ಪು ಬೋಧಕರು ಮಾನವರ ಅನೇಕ ಪಾಪಗಳು ದೇವರ ಕೃಪೆಯು ಹೆಚ್ಚಿ, ಕ್ಷಮಿಸಲ್ಪಡುತ್ತವಾದ್ದರಿಂದ, ಪಾಪವನ್ನು ಹೆಚ್ಚಿಸಿಕೊಳ್ಳುವುದರಿಂದ ದೇವರ ಕೃಪೆಯನ್ನು ಉಪಯೋಗಿಸಿಕೊಳ್ಳಲು ಹೆಚ್ಚಿನ ಅವಕಾಶಗಳು ದೊರೆಯುತ್ತದೆಂಬುದಾಗಿ ಸಲಹೆ ಮಾಡುತ್ತಿದ್ದರು. ಅದೊಂದು ವಿನಾಶಕರ ಸಲಹೆಯಾಗಿದೆ, ಪೌಲನು ದೀಕ್ಷಾಸ್ನಾನದ ಅರ್ಥವನ್ನು ಹೇಳುವುದರ ಮೂಲಕ ಅದಕ್ಕೆ ಉತ್ತರ ಕೊಟ್ಟನು. "ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೊ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡೆದುಕೊಳ್ಳಬೇಕು. ಹೇಗೆಂದರೆ, ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ, ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು." (ರೋಮಾ 6:3-5).

ಇಲ್ಲಿ ಪೌಲನು ಮಾನವರ ರಕ್ಷಣೆಗೋಸ್ಕರ ಕ್ರಿಸ್ತನ ಕಾರ್ಯದಲ್ಲಿನ ಅಗತ್ಯವಾದ ಅಂಶಗಳು ದೀಕ್ಷಾಸ್ನಾನ ಸಂಸ್ಕಾರದ ಹಾಗೂ ಅದರ ಭಾವನಾರ್ಥದೊಂದಿಗೆ ಬೇರ್ಪಡಿಸಿರಲಾರದ ಸಂಬಂಧವೆಂದು ದೃಢೀಕರಿಸುತ್ತಾನೆ. ವಿಶ್ವಾಸಿಗಳೂ ಹಾಗೆಯೇ ಅರಿತಿದ್ದರು. ಕ್ರಿಸ್ತನು ಸತ್ತನು, ಹೂಣಲ್ಪಟ್ಟನು ಮತ್ತು ಪುನಃ ಎದ್ದನು. ಇದರ ಮೂಲಕ ಮಾನವರು ತಮ್ಮ ಪಾಪಗಳನ್ನು ಕ್ಷಮಿಸಲ್ಪಟ್ಟು ನಿತ್ಯಜೀವ ಹೊಂದಲು ಸಾಧ್ಯವಾಯಿತು. ಕ್ರಿಸ್ತನ ಮರಣದಲ್ಲಿ—ಪಾಪವು ದೈವಕಟ್ಟಳೆಯಿಂದ ಮರಣವನ್ನೇ ತರುತ್ತದೆ; ಮಾಂಸವು (ಶರೀರವು) ಪಾಪ ಮಾಡುವಂಥಾದ್ದಾಗಿರುವುದರಿಂದ ಅದೆಂದಿಗೂ ಇರುವುದಕ್ಕೆ ಅನರ್ಹವಾದದ್ದಾಗಿದೆ ಮತ್ತು ಅದನ್ನು ನಿರಾಕರಿಸಬೇಕಾಗಿದೆ—ಎಂಬ ನೈತಿಕ ತತ್ವಗಳನ್ನು ಎತ್ತಿ ಹಿಡಿಯಲ್ಪಟ್ಟವು. ಇದನ್ನೇ ವಿಶ್ವಾಸಿಗಳು

ನಂಬಿದ್ದರು. ತನ್ನ ದೀಕ್ಷಾಸ್ನಾನದಿಂದ ಒಬ್ಬ ವಿಶ್ವಾಸಿಯು, ದೇವರು ನೇಮಿಸಿದ ರೀತಿಯಲ್ಲಿ ಕೊಯ್ಯಲ್ಪಟ್ಟ ದೇವರ ಕುಮಾರನೊಂದಿಗೆ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಮತ್ತು ದೇವರ ನೀತಿಯಲ್ಲಿ ಮಾನವರಿಗೆ ಮರಣವೇ ಅಂತ್ಯವೆಂಬುದನ್ನು ಘೋಷಿಸುವ ಸಂಕೇತವೇ ಈ ಮಾರ್ಗವೆಂದು ಅವರು ಅರಿತಿರುತ್ತಾರೆ. ದೀಕ್ಷಾಸ್ನಾನದಲ್ಲಿ ನಮ್ಮ ಪಾಪದ ಪ್ರಕೃತಿಯು ನಿರಾಕರಿಸಲ್ಪಡುತ್ತದೆ. “ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವ ಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತು.” (ರೋಮಾ 6:6). ಕ್ರಿಸ್ತನು ಸತ್ತವರೊಳಗಿಂದ ಒಂದು ಹೊಸ ಜೀವಿತಕ್ಕೆ ಹೇಗೆ ಎದ್ದನೋ ಹಾಗೆಯೇ ವಿಶ್ವಾಸಿಯೂ ಕೂಡ ದೀಕ್ಷಾಸ್ನಾನದಿಂದ ಒಬ್ಬ ಹೊಸ ಮನುಷ್ಯನಾಗಿ ಎದ್ದೇಳುತ್ತಾನೆ—ಪಾಪಕ್ಕೆ ಅಧೀನವಾಗಿರುವುದನ್ನು ನಿರಾಕರಿಸಲಾಗಿದೆ—ಯಾಕೆಂದರೆ ಮರಣವು ಎಲ್ಲಾ ರೀತಿಯ ಅಧೀನತ್ವವನ್ನು ರದ್ದುಗೊಳಿಸುತ್ತದೆ; ಹೊಸ ಜೀವಿತವು ನೀತಿಯ ಮಾರ್ಗವನ್ನು ಸ್ವೀಕರಿಸುವಂಥದ್ದಾಗಿದೆ.

## ದೇವರ ಬಳಿ ಸಾರಲು ಸರಿಯಾದ ಮಾರ್ಗ.

ನಮ್ಮ ಪಾಪಗಳು ಕ್ಷಮಿಸಲ್ಪಡಬೇಕಾದರೆ ನಾವು ಪಾಪಕ್ಕೂ ಮರಣಕ್ಕೂ ಇರುವ ಸಂಬಂಧವನ್ನೂ ಅದರ ಕಾರಣ ಹಾಗೂ ಪರಿಣಾಮಗಳನ್ನು ಅರಿತು, ಮರಣವು ನಮಗೆ ಸಲ್ಲಬೇಕಾದುದೆಂದು ಒಪ್ಪಿಕೊಳ್ಳಬೇಕೆಂಬುದೇ ದೇವರ ಷರತ್ತಾಗಿದೆ. ಆದರೆ ಈ ರೀತಿಯಾದ ಒಪ್ಪಿಗೆಯನ್ನು ದೀಕ್ಷಾಸ್ನಾನದಲ್ಲಿ ಒಳಪಡಿಸುವುದಲ್ಲದೇ ಕ್ರಿಸ್ತನಲ್ಲಿ ನಂಬಿಕೆಯಿಟ್ಟರೆ ಅದಕ್ಕೆ ಬೆಲೆಯಿರುತ್ತದೆ. ಯಾಕೆಂದರೆ ಅವನಲ್ಲಿಯೂ ಪಾಪವು ವಾಸ್ತವವಾಗಿ ಮುರಿಯಲ್ಪಟ್ಟಿತು ಮತ್ತು ಅವನಲ್ಲಿಯೇ ಮರಣವನ್ನು ಹೋಗಲಾಡಿಸಲಾಯಿತು. ಪಾಪ ಮತ್ತು ಮರಣದ ಸಂಬಂಧವನ್ನು ಒಪ್ಪಿಕೊಳ್ಳುವುದರಿಂದ ಸತ್ಯವನ್ನು ಘೋಷಿಸಿದಂತಾಗುತ್ತದೆ. ಆದರೆ ರಕ್ಷಣೆಯನ್ನು ತರುವುದಕ್ಕಾಗುವುದಿಲ್ಲ. ಸುವಾರ್ತೆಯಲ್ಲಿ ನಂಬಿಕೆಯೊಂದಿಗೆ ದೀಕ್ಷಾಸ್ನಾನದ ಕಾರ್ಯವು, ಯೇಸುಕ್ರಿಸ್ತನು ಶಿಲುಬೆಯ ಮರಣದಲ್ಲಿ ಏನು ಪೂರೈಸಿದನೋ ಅದನ್ನು ಗುರುತಿಸುವುದಾಗಿದೆ. “ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ” ಎಂದು ಪೌಲನು ಹೇಳಿದನು, “ಇನ್ನು ಜೀವಿಸುವವನು ನಾನಲ್ಲ; ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ. ಈಗ ಶರೀರದಲ್ಲಿರುವ ನಾನು ಜೀವಿಸುವುದು ಹೇಗೆಂದರೆ ದೇವಕುಮಾರನ ಮೇಲಣ ನಂಬಿಕೆಯಿಂದಲೇ. ಆತನು ನನ್ನನ್ನು ಪ್ರೀತಿಸಿ, ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು.” (ಗಲಾತ್ಯ 2:20). ಕ್ರಿಸ್ತನೊಂದಿಗೆ ಅಂತಹ ಒಂದು ಸಾಮಿಪ್ಯದ ಒಡನಾಟವು ನಮಗಾಗಿ ಕ್ರಿಸ್ತನಲ್ಲಿ ಪೂರೈಸಲ್ಪಟ್ಟ ಎಲ್ಲವನ್ನೂ ಅರಿಯುವಂತೆ ಮಾಡುತ್ತದೆ. “ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿರಿ—ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವುದರ

ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ" (ಕೊಲೊಸ್ಸೆ 2:12). ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಸೇರುವುದರಿಂದ ಆತನು ಪುನಃ ಬಂದಾಗ, ನಾವು ಆತನೊಂದಿಗೆ ಮುಂದಣ ಮಹಿಮೆಗೆ ಬಾಧ್ಯರಾಗುತ್ತೇವೆ. "ಹೇಗೆಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವುದರಿಂದ, ಯೆಹೂದ್ಯನು ಗ್ರೀಕನು ಎಂದೂ ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ. ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" (ಗಲಾತ್ಯ 3:27-29).

ದೀಕ್ಷಾಸ್ನಾನದ ಕಾರ್ಯದಿಂದ ಒಬ್ಬ ಮನುಷ್ಯನು ದೇವರ ಮುಂದೆ ತನ್ನ ಅಂತಸ್ತನ್ನು ಬದಲಾಯಿಸಿಕೊಳ್ಳುತ್ತಾನೆ; ತನ್ನ ಹಳೆಯ ಹಿಂದಿನ ಬದುಕು ಹೂಳಲ್ಪಡುತ್ತದೆ; ಕ್ಷಮಿಸಲ್ಪಟ್ಟ ಮನುಷ್ಯನಾಗಿ ಎದ್ದುಬರುತ್ತಾನೆ. ಕ್ರಿಸ್ತನಲ್ಲಿರುವ ಸ್ವೀಕಾರದಿಂದ ಅವನು ದೇವರ ಒಬ್ಬ ಮಗನಾಗುತ್ತಾನೆ. ಆದರೆ ಅವನು ನಿತ್ಯ ಜೀವಕ್ಕೆ ಹೋಗುವ ಮಾರ್ಗವನ್ನು ಮಾತ್ರ ಪ್ರವೇಶಿಸಿದ್ದಾನೆ. ಮಾರ್ಗವು ಅವನ ಮುಂದಿದೆ. ಗುರಿಯನ್ನು ಮುಟ್ಟಲು ಅವನ ಪ್ರಯತ್ನಗಳು ಕರ್ತನು ಬರುವವರೆಗೆ ಅಥವಾ ಮರಣವು ಅವನನ್ನು ನಿದ್ರೆಯ ವಿಶ್ರಾಂತಿಗೆ ಸೇರಿಸುವವರೆಗೆ ಮುಂದುವರೆಯುತ್ತದೆ. ಹೃದಯವು ನಂಬಿಕೆಯಿಂದ ಶುದ್ಧೀಕರಣವಾಗಿರುವುದರಿಂದ, ಮಾರ್ಗದ ನಿಯಮವು "ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಲೇ ಇರುವುದರಲ್ಲಿದೆ" (ರೋಮಾ. 2:7) ಗುಣವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ದೇವರ ಚಿತ್ತಕ್ಕೆ ವಿರುದ್ಧವಾಗಿರುವ ಪ್ರಾಕೃತ ಮಾನವನ ಆಶೆಗಳನ್ನು ಹತ್ತಿಕ್ಕಬೇಕು. (ಮುಂದುವರೆಯುವುದು)

---

# ಯೌವನಸ್ಥರಿಗಾಗಿ

(ಹಿಂದಿನ ಸಂಚಿಕೆಯಿಂದ)

ದೇವರ ನಿಯಮಪಾಲನೆಗಾಗಿ ತನಗೆ ಒದಗಿಬಂದ ಸೆರೆಯವಾಸದಲ್ಲಿಯೂ ತನ್ನ ದೇವರನ್ನು ಮಾತ್ರ ಮರೆಯದವನಾದನು. ಪರದೇಶದಲ್ಲಿ ಜೀವಿಸುವವನಾದರೂ, ಜೀವಸ್ವರೂಪನಾದ ತನ್ನ ದೇವರನ್ನು ಮಹಿಮೆಗೆ ತರುವವನಾದನು. ಅರಸನ ಮುಂದೆ ತನ್ನ ದೇವರು ಎಂತಹವನಾಗಿರುತ್ತಾನೆಂದು ತೋರ್ಪಡಿಸಿದನು. ತನ್ನ ಸೆರೆಯ ಕಷ್ಟಗಳನ್ನು ಮರೆತನು. 'ಅವನ ಕಾಲು ಕೋಳದಲ್ಲಿ ನೊಂದವು, ಕಬ್ಬಿಣದ ಬೇಡಿಗಳಿಂದ ಅವನು ಬಂಧಿತನಾದನು. (ಕೀರ್ತನೆ. 105: 16-17). ಶೋಧನೆಯಿಂದ ಜಯಿಸಲ್ಪಟ್ಟ ಆತನಿಗೆ ದೇವರು ಕೊಟ್ಟ ಅಧಿಕಾರವನ್ನು ಸಹ ಕಾಣಬಹುದು. ದೇವರ ವಾಕ್ಯವು ಸದ್ವೃತ್ತದ ವಿಷಯದಲ್ಲಿ ಯಾವ ಹಿತೋಕ್ತಿಯಿಂದ ಜೀವಿತವೆಲ್ಲ ದಿಟ್ಟ ಹೆಜ್ಜೆ ಇಡಲು ಪ್ರಬೋಧಿಸುತ್ತದೆ? ಅದನ್ನು ಎದೆಗುಂದದೆ ಯೌವನಸ್ಥ ಜೀವಿತ

ಯಲ್ಲಿ ಸಾಗಿಸಲು ಮನಸ್ಸು ಮಾಡಬೇಕು. ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು. "ಯೌವನಸ್ಥನೇ, ಪ್ರಾಯದಲ್ಲಿ ಆನಂದಿಸು; ಯೌವನದ ದಿನಗಳಲ್ಲಿ ಹೃದಯವು ನಿನ್ನನ್ನು ಹರ್ಷಗೊಳಿಸಲಿ; ಮನಸ್ಸಿಗೆ ತಕ್ಕಂತೆಯೂ ಕಣ್ಣಿಗೆ ಸರಿಬೀಳುವ ಹಾಗೆಯೂ ನಡೆದುಕೋ; ಆದರೆ ಈ ಎಲ್ಲಾ ವಿಷಯಗಳಲ್ಲಿಯೂ ದೇವರು ನಿನ್ನನ್ನು ನ್ಯಾಯವಿಚಾರಣೆಗೆ ಗುರಿ ಮಾಡುವನೆಂದು ತಿಳಿದಿರು." (ಪ್ರಸಂಗಿ 11 : 9). ಸಹೋದರರು ಹೊಟ್ಟೇಕಿಚ್ಚಿನಿಂದ ತನಗೆ ದ್ರೋಹವನ್ನು ಬಗೆದವರಾಗಿದ್ದರೂ ಕೂಡ ಅವರಿಗೆ ಒದಗಿಬಂದ ಬರಗಾಲದ ಕಷ್ಟದಲ್ಲಿ ಆತನು ನೆರವಾದನು. ಮುಯ್ಯಿಗೆ ಮುಯ್ಯಿ ತೀರಿಸಲಿಲ್ಲ. ಸಹೋದರ ಪ್ರೀತಿಯು ಎಂಥದು ಎಂಬುದನ್ನು ತೋರಿಸಿಕೊಟ್ಟನು. ದೇವರಿಂದ ನೇಮಿಸಲ್ಪಟ್ಟ ಯೋಗ್ಯ ಅಧಿಕಾರಿಯಂತೆ ವರ್ತಿಸಿದನು. "ಮಿತ್ರನ ಪ್ರೀತಿಯನಂತರ, ಸಹೋದರನ ಜನ್ಮವು ಆಪತ್ತಿನಲ್ಲಿ ಸಾರ್ಥಕ." (ಜ್ಞಾನೋಕ್ತಿ 17 : 1 ). ದೇವರ ವಾಕ್ಯವು ಎಷ್ಟು ಸ್ಪಷ್ಟವಾಗಿದೆ; ಈ ಸಹೋದರನು ತನ್ನವರಿಗೆ ಒದಗಿದ ಆಪತ್ತಿನಲ್ಲಿ ಹೇಗೆ ಸಹಾಯಕನಾದನು! ಇದನ್ನು ತಿಳಿದ ನಾವು ನಮ್ಮ ಸಹೋದರರ ಬಾಳಿನಲ್ಲಿ ಹೇಗೆ ನೆರವಾಗಬೇಕು ಎಂಬುದು ಗಮನಾರ್ಹ ಸಂಗತಿಯಾಗಿರುತ್ತದೆ.

ಇಂದು ಕ್ರೈಸ್ತ ಸಹೋದರರಲ್ಲಿ ಅತಿ ಪ್ರಮುಖವಾಗಿ ಕಾಣುವ ಕೊರತೆ ಯಾವುದು? ಅಂದು ಇಸ್ರಾಯೇಲ್ ಮನೆತನಕ್ಕೆ ಲೋಕದಲ್ಲಿ ಜೀವಿತರಾಗಿರಲು ಅವಶ್ಯಕವಾದ ಆಹಾರವೇ ತೆಗೆಯಲ್ಪಟ್ಟಿರುವಾಗ, ಅವರಿಗೆ ತಾವು ಯಾರನ್ನು ಬೇಡವೆಂದು ಮಾರಿಬಿಟ್ಟರೋ ಆತನಿಂದಲೇ ಅವರ ಜೀವಿತಕ್ಕೆ ದೇವರು ಆಹಾರವನ್ನು ಒದಗಿಸಿಕೊಟ್ಟದ್ದನ್ನು ಕಾಣುತ್ತೇವೆ. ಅದೇ ರೀತಿಯಲ್ಲಿ ಯೆಹೂದ್ಯರು ತಾವು ಯಾವ ಅರಸನನ್ನು ಬೇಡವೆಂದರೋ ಆ ಅರಸನ ಮೂಲಕವೇ ದೇವರು ನಿತ್ಯಜೀವದ ಆಹಾರವನ್ನು ಅವರಿಗೆ ಒದಗಿರುವುದನ್ನು ಕಾಣುತ್ತೇವೆ. ಕರ್ತನಾದ ಯೆಹೋವನು ಇಂತೆನ್ನುತ್ತಾನೆ :—"ಆಹಾ, ನಾನು ದೇಶಕ್ಕೆ ಕ್ಷಾಮವನ್ನು ಉಂಟುಮಾಡುವ ದಿನಗಳು ಬರುತ್ತವೆ; ಅದು ಅನ್ನದ ಕ್ಷಾಮವಲ್ಲ, ನೀರಿನ ಕ್ಷಾಮವಲ್ಲ, ಯೆಹೋವನ ವಾಕ್ಯಗಳ ಕ್ಷಾಮವೇ". (ಆಮೋಸ 8 : 11). ದೇವರಿಂದ ನೇಮಿಸಲ್ಪಟ್ಟಿರುವ ಕ್ರಿಸ್ತನಿಂದ ಕೊಡಲ್ಪಟ್ಟಿರುವ ಆಹಾರವನ್ನು ಸೇವಿಸುವುದರಿಂದ ಜೀವವನ್ನು ಪಡೆಯುವವರಾಗಿರುತ್ತೇವೆ. "ಮನುಷ್ಯನು ಆಹಾರದಿಂದಲ್ಲ ಯೆಹೋವನ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾರೆಂಬುದು ನಿಮಗೆ ತಿಳಿಯುವಂತೆ ಆತನು ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ಹಸಿವೆಯಿಂದ ಬಳಲಿಸಿ ನಿಮಗೂ ನಿಮ್ಮ ಪೂರ್ವಿಕರಿಗೂ ಗೊತ್ತಿಲ್ಲದ ಮನ್ನವನ್ನು ಕೊಟ್ಟು ಪೋಷಿಸಿದನು. (ಧರ್ಮೋ 8:3).

ಆದರೆ ದೇವರು ಇಂದು ತನ್ನನ್ನು ಹಿಂಬಾಲಿಸುವ, ವಿಧೇಯರೂ, ನಂಬಿಗಸ್ತರೂ ಆದ ಜನರಿಗೆ ಈ ಅಮೂಲ್ಯವೂ, ಶ್ರೇಷ್ಠವೂ ಆದ ದಿವ್ಯಾಹಾರವನ್ನು ಒದಗಿಸಿ ನಿತ್ಯಜೀವವನ್ನು ಕೊಡಲು ಸದಾ ಸಿದ್ಧನಿರುವನು. (ಯೋಹಾನ 6:31-33) [illegible]

ನಿಜನಿಜವಾಗಿ ಹೇಳುತ್ತೇನೆ, ಮೋಶೆಯು ನಿಮಗೆ ಪರಲೋಕದಿಂದ ರೊಟ್ಟಿ ಕೊಟ್ಟವನಲ್ಲ! ನನ್ನ ತಂದೆಯು ಪರಲೋಕದಿಂದ ಬರುವ ನಿಜವಾದ ರೊಟ್ಟಿಯನ್ನು ನಿಮಗೆ ಕೊಡುತ್ತಾನೆ; ದೇವರು ಕೊಡುವ ಆ ರೊಟ್ಟಿ ಯಾವುದೆಂದರೆ ಪರಲೋಕದಿಂದ ಇಳಿದು ಬಂದು ಲೋಕಕ್ಕೆ ಜೀವವನ್ನು ಉಂಟುಮಾಡುವಂಥದೇ ಎಂದು ಹೇಳಿದನು. “..........ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ, ಇಂಥ ಆಹಾರವನ್ನು ಮನುಷ್ಯಕುಮಾರನು ನಿಮಗೆ ಕೊಡುವನು..........” (ಯೋಹಾನ 6:27) ನಿತ್ಯಜೀವವು ಬೇಕಾದಲ್ಲಿ ನಾವು ಯಾರ ಬಳಿಗೆ ಹೋಗಬೇಕು? ಶಿಷ್ಯರು ಈ ವಿಷಯದಲ್ಲಿ ಕಂಡುಕೊಂಡ ಸಂಗತಿಯೇನು? ಯೇಸು ತಾನೇ ಹೇಳಿರುವ ಮತ್ತೊಂದು ಮಾತು ಹೀಗಿದೆ: “ನಾನು ನಿಮಗೆ ಹೇಳಿರುವ ಆ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಇವೆ.” (ಯೋಹಾನ 6:63).

ಹೀಗೆ ದೇವರ ಮೂಲಕ ಕೊಡಲ್ಪಟ್ಟ ಈ ವಾಕ್ಯಗಳ ಆಧಾರದಂತೆ ಜೀವಿತ ಸಾಗಿಸುವ ಪ್ರತಿಯೊಬ್ಬನಿಗೂ ನಿತ್ಯಜೀವವು ದೊರಕುತ್ತದೆ. “..........ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.” (ಯೋಹಾನ 3:16) “ಹೀಗೆ ಪಾಪವು ಮರಣವನ್ನುಂಟು ಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡೆಸುವದು.” (ರೋಮಾ 5:21).

ಕ್ರೈಸ್ತ ಸಹೋದರರನ್ನು ಎಚ್ಚರಿಸುವ ದೇವರ ವಾಕ್ಯವನ್ನು ನಮ್ಮ ಜೀವಿತದಲ್ಲಿ ಆದರ್ಶವಾಗಿಟ್ಟುಕೊಂಡು ನಮ್ಮನ್ನು ಆತನ ಚಿತ್ತಕ್ಕೆ ಒಪ್ಪಿಸಿಕೊಳ್ಳೋಣ. “ಆಹಾ ಸಹೋದರರು ಒಂದಾಗಿರುವುದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು.” (ಕೀರ್ತನೆ 138:1), ನಾವು ಈ ವಾಕ್ಯದ ಜೀವಿತವನ್ನು ಯೇಸುವಿನಲ್ಲಿ ಕಾಣಬಹುದಾಗಿದೆ; ದ್ವೇಷಿಸಿದ ಸಹೋದರರು ಮಾತ್ರವಾಗಿರದೆ ದಾಸತ್ವಕ್ಕೆ ಆತನನ್ನು ಮಾರಿದ ಸಹೋದರರಾದ ಇವರನ್ನು ಹೇಗೆ ಕಂಡನು, ಯೋಸೇಫನಿಗೆ ಅವರು ಈಗ ಸಹೋದರರಲ್ಲ, ವೈರಿಗಳೇ, ಶತ್ರುಗಳೇ ಆಗಿರುವರು. “..........ನೀವು ಗೂಢಚಾರರು, ನಮ್ಮ ದೇಶದ ದುರ್ಬಲ ಸ್ಥಳಗಳನ್ನು ನೋಡಿಕೊಳ್ಳುವುದಕ್ಕಾಗಿ ಬಂದವರು ಎಂದು ಹೇಳಲು..........”(ಆದಿ 42:9), ಆದರೆ ನಿಜವಾಗಿಯೂ ಅವರಿಗೆ ಸಂತೃಪ್ತಿಕೆಯನ್ನು ತೋರಿಸಿದನು, ಕಷ್ಟದಲ್ಲಿರುವ ಅವರನ್ನು ಹೇಗೆ ದ್ವೇಷಿಸಿದನು. “..........ನಿಮ್ಮ ಶತ್ರು ಬಿದ್ದರೆ ಹಿಗ್ಗಬೇಡ, ಎಡವಿದರೆ ನಿನ್ನ ಹೃದಯವು ಹರ್ಷಿಸದಿರಲಿ!” (ಜ್ಞಾನೋಕ್ತಿ 24:17). ಈ ವಿಷಯದಲ್ಲಿ ಮೋಶೆಯ ಧರ್ಮವಿಧಿಯು ಹೇಳುತ್ತದೆ—“ಸಹೋದರನ ವಿಷಯವಾಗಿ ಮನಸ್ಸಿನಲ್ಲಿ ದ್ವೇಷವನ್ನು ಇಟ್ಟುಕೊಳ್ಳಬಾರದು..........” (ಯಾಜಕ 19:17-18) “..........ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಗೆ ಮಾಡುವವರಿಗೆ ಉಪಕಾರ ಮಾಡಿರಿ.” ಹಾಗಾದರೆ

ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು ; ಬಾಯಾರಿದ್ದರೆ ಕುಡಿಯುವುದಕ್ಕೆ ಕೊಡು. ಹೀಗೆ ಮಾಡುವುದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವುದು. ಕೆಟ್ಟತನಕ್ಕೆ ಸೋತುಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು. (ರೋಮಾ 12:20-21).

ಕಾಯಿನನು ಹೇಬಲನನ್ನು, ಏಸಾವನು ಯಾಕೋಬನನ್ನು ದ್ವೇಷಿಸುವವರಾದರು. ಯೋಸೇಫನು ತನ್ನ ಸಹೋದರರನ್ನು ದ್ವೇಷಿಸದೆ. ಪ್ರೀತಿಸುವವನಾದನು. "ತನ್ನ ಸಹೋದರರನ್ನು ಪ್ರೀತಿಸುವವನು ಬೆಳಕಿನಲ್ಲಿ ನೆಲೆಗೊಂಡಿದ್ದಾನೆ. ಮತ್ತು ಅವನಲ್ಲಿ ವಿಘ್ನಕರವಾದದ್ದು ಏನೂ ಇಲ್ಲ. ತನ್ನ ಸಹೋದರರನ್ನು ದ್ವೇಷಿಸುವವನು ಕತ್ತಲೆಯಲ್ಲಿ ನಡೆದುಕೊಳ್ಳುತ್ತಾನೆ. ಕತ್ತಲೆಯು ಅವನ ಕಣ್ಣುಗಳನ್ನು ಕಾಣದ ಹಾಗೆ ಮಾಡಿದ್ದರಿಂದ ತಾನು ಎಲ್ಲಿಗೆ ಹೋಗುತ್ತಾನೋ ಅವನಿಗೆ ತಿಳಿಯದು. (ಯೋಹಾನ 2:11), ದೇವರ ಆಜ್ಞೆಯು ನಮ್ಮಲ್ಲಿ ನೆರವೇರಬೇಕು. ನಾವು ದೇವರನ್ನು ಅರಿತವರೂ ಮತ್ತು ಪ್ರೀತಿಸುವವರೂ ಎಂಬುದಕ್ಕೆ ಇದು ನಮ್ಮಲ್ಲಿ ಸಾಗಬೇಕು. "ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸಬೇಕೆಂಬ ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ. (1 ಯೋಹಾನ 4:20-21).

ಅಪರಾಧಿಗಳಾದ ತನ್ನ ಸಹೋದರರನ್ನು ಯೋಸೇಫನು ಯಾವ ರೀತಿ ಕಾಪಾಡಿದನು ? ದಾಸರಂತೆ ಭಾವಿಸಿದನೋ ? ಅವರ ಅಪರಾಧಗಳನ್ನು ಮನ್ನಿಸಿದನು. "ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. (ಮತ್ತಾಯ 6:12-15) ದೇವರು ನಮಗೆ ದಯಪಾಲಿಸಿರುವ ಈ ವಾಕ್ಯಗಳ ಆಧಾರದಂತೆ ನಡೆಯುವುದಾದರೆ ನಮ್ಮ ಪಾಪದ ಅಪರಾಧವನ್ನು ಆತನು ಕ್ಷಮಿಸುವವನಾಗಿರುತ್ತಾನೆ. ಹೀಗೆ ಆತನ ಕ್ಷಮಾಪಣೆಯಿಂದ ಪಾಪದ ಸಂಬಳವಾದ ಮರಣದಿಂದ ಬಿಡುಗಡೆ ಹೊಂದಿ ನಿತ್ಯಜೀವವನ್ನು ಹೊಂದುವವರಾಗುತ್ತೇವೆ. "ಸುಳ್ಳಾಡದ ದೇವರು ಆ ನಿತ್ಯಜೀವವನ್ನು ಕೊಡುತ್ತೇನೆಂದು ಅನಾದಿಕಾಲದಲ್ಲಿ ವಾಗ್ದಾನಮಾಡಿ ತನ್ನ ಕ್ಲುಪ್ತ ಸಮಯದಲ್ಲಿ ವಾಗ್ದಾನ ನೆರವೇರಿಸಿ ಪ್ರಸಂಗದ ಮೂಲಕ ಪ್ರಕಟಿಸಿದನು, ಆ ಪ್ರಸಂಗೋದ್ಯೋಗವು ನಮ್ಮ ರಕ್ಷಕನಾದ ದೇವರ ಅಪ್ಪಣೆಯ ಪ್ರಕಾರ ನನಗೆ ಒಪ್ಪಿಸಲ್ಪಟ್ಟಿದೆ." (ತೀತ 1:3-4) ಯಾಕೋಬನು ಸಾಯುವ ಮೊದಲು ತನ್ನ ಮಕ್ಕಳಿಗೆ ಕೊಟ್ಟ ಅಪ್ಪಣೆಯಂತೆ ತನ್ನ ತಮ್ಮನ ಬಳಿಯಲ್ಲಿ ತಮ್ಮ ಅಪರಾಧಗಳಿಗೆ ಕ್ಷಮೆ ಕೋರಿದರು. ಯೋಸೇಫನು ಅವರಿಗೆ "ಆದುದರಿಂದ ನೀವು ಸ್ವಲ್ಪವೂ ಭಯಪಡಬೇಡಿರಿ ; ನಾನು ನಿಮ್ಮನ್ನೂ ನಿಮಗೆ ಸೇರಿದವರನ್ನೂ ಪೋಷಿಸುವೆನು" ಎಂದು ಹೇಳಿ ಅವರನ್ನು ಸಂತೈಸಿ ಅವರ ಸಂಗಡ ಪ್ರೀತಿಯಿಂದ ಮಾತಾಡಿದನು, (ಆದಿಕಾಂಡ 50:21). ಪೌಲನು ತಿಳಿಸಿರುವಂತೆ ಈ ಪ್ರೀತಿಯು ದ್ರೋಹ ಬಗೆದ ಸೋದರರ ವಿಷಯದಲ್ಲಿ ಯೋಸೇಫನಲ್ಲಿ ಹೇಗೆ ಕಾರ್ಯಗತವಾಯಿತು ಎಂಬುದನ್ನು ನಾವು ಬಹಳ

ವಾಗಿ ಯೋಚಿಸಬೇಕು. ನಮ್ಮ ಜೀವಿತದಲ್ಲಿಯೂ ಈ ರೀತಿ ನಮ್ಮ ಸಹೋದರರ ಬಗ್ಗೆ ಸಾಗಿಬರಲು ದೇವರು ತನ್ನ ಶಕ್ತಿಯನ್ನು ನಮಗೆ ದಯಪಾಲಿಸುವಂತೆ ಯೇಸುಕ್ರಿಸ್ತನ ಮೂಲಕ ವಿಜ್ಞಾಪಿಸೋಣ. ನಮಗೆ ಈ ವಾಕ್ಯಗಳು ಬಾಯಿಪಾಠವಾಗಿದ್ದರೂ ಮತ್ತೊಂದಾವರ್ತಿ ಅದನ್ನು ಓದೋಣ ಮತ್ತು ಜೀವಿತದಲ್ಲಿ ಯೋಸೇಫನಂತೆ ಅಳವಡಿಸಿಕೊಳ್ಳಲು ಪ್ರಯತ್ನ ಮಾಡೋಣ. “ಪ್ರೀತಿ ಬಹು ತಾಳ್ಮೆಯುಳ್ಳದ್ದು ಉಬ್ಬಿಕೊಳ್ಳುವುದಿಲ್ಲ. ಮರ್ಯಾದೆಗೆಟ್ಟು ನಡೆಯುವುದಿಲ್ಲ. ಸ್ವಪ್ರಯೋಜನವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ, ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲೀ ಸಂತೋಷಪಡುತ್ತದೆ, ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. (ಕೊರಿಂಥ 13:4-7).

ಪ್ರೀತಿಯ ಯೌವನಸ್ಥ ಯೌವನಸ್ಥೆಯರೇ, ನಾವು ಯೋಸೇಫನ ಜೀವಿತದಿಂದ ತಿಳಿಯುವ ಸಂಗತಿಗಳೇನು? ನಮ್ಮ ಜೀವಮಾನವನ್ನು ಅದರಂತೆ ಪರಿವರ್ತಿಸಿಕೊಳ್ಳಲು ಸಾಧ್ಯಮಾಡಿಕೊಳ್ಳುವುದು ಹೇಗೆ ? ಎಂಬುದನ್ನು ಚಿಂತಿಸಬೇಕಲ್ಲವೇ ? ಯೋಚಿಸಬೇಕಲ್ಲವೆ ? ನಾವು ಪ್ರಯತ್ನ ಮಾಡುವುದಾದರೆ ನಡೆಸುವಿಕೆಯು ಎಂದಿಗೂ ನಿಲ್ಲಲಾರದು.

ಅಬ್ರಹಾಮ, ಇಸಾಕ, ಯಾಕೋಬರ ಒಬ್ಬನೇ ದೇವರಲ್ಲಿ ನಂಬಿಕೆಯಿಡುವುದು, ಆ ದೇವರ ಆಜ್ಞೆಗಳಿಗೆ ವಿಧೇಯರಾಗುವುದು, ಶರೀರಭಾವದ ಅಭಿಲಾಷೆಗಳಿಂದ ದೂರವಿರುವುದು, ಸಹೋದರರನ್ನು ಪ್ರೀತಿಸುವುದು ಇವುಗಳು ನಮ್ಮ ಜೀವಿತದ ಭಾಗಗಳಾಗಿರುವಂತೆ ಸಾಗುವುದು ದೇವರಿಗೆ ಮೆಚ್ಚಿಕೆಯಾಗಿರುತ್ತದೆ.

“ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ ? ಯಜ್ಞವನ್ನರ್ಪಿಸುವುದಕ್ಕಿಂತ ಮಾತು ಕೇಳುವುದು ಉತ್ತಮವಾಗಿದೆ. ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ. ಅವಿಧೇಯತ್ವವು ಮಂತ್ರತಂತ್ರಗಳಷ್ಟೇ ಕೆಟ್ಟದಾಗಿರುವುದು; ಹಟವು ಮಿಥ್ಯಾಭಕ್ತಿಗೂ ವಿಗ್ರಹಾರಾಧನೆಗೂ ಸಮಾನವಾಗಿರುವುದು.” (1 ಸಮು 15:22-23).

ಈ ಶ್ರೇಷ್ಠ ಹೋರಾಟ ಯುವಜನತೆ ಮಾತ್ರವೇಕೆ ಪ್ರತಿಯೊಬ್ಬರೂ ತಮ್ಮ ಜೀವಿತವನ್ನು ಹೀಗೆ ಬದಲಾಯಿಸಿಕೊಳ್ಳುವುದು ಯೋಗ್ಯವಾಗಿರುತ್ತದೆ.

—ವಿ. ಜಯವಂತ, ಮಂಡ್ಯ



# ಮಕ್ಕಳ ಪುಟ

## ರಕ್ಷಕನು ಹುಟ್ಟಿದನು

ಪ್ರಿಯ ಮಕ್ಕಳಿರಾ,

ಕಳೆದ ಸಂಚಿಕೆಯಲ್ಲಿ ದೇವರು ಪ್ರಥಮ ಮಾನವನನ್ನು ಸೃಷ್ಟಿಸಿದ್ದನ್ನೂ ಆದಾಮನೂ ಹವ್ವಳೂ ದೇವರ ಆಜ್ಞೆಗೆ ಅವಿಧೇಯರಾಗಿ ಪಾಪಕ್ಕೆ ಒಳಗಾದ್ದರಿಂದ ತಮ್ಮ ಮೇಲೆ ಮರಣವನ್ನು ತಂದುಕೊಂಡದ್ದನ್ನೂ ನೀವು ಓದಿದಿರಿ. ಆದರೆ ದೇವರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ತನ್ನ ಸೃಷ್ಟಿಯಾದ ಮಾನವನನ್ನು ನಾಶವಾಗಲಿಕ್ಕೆ ಬಿಡದೆ ಮತ್ತೆ ಜೀವಿಸುವ ಒಂದು ಮಾರ್ಗವನ್ನು ಅವನಿಗೆ ತೋರಿಸುತ್ತಾನೆ. ಅದು ಯೇಸುಕ್ರಿಸ್ತನಲ್ಲಿ ನೆರವೇರುವಂತಹ ಜೀವದ ಮಾರ್ಗ. ಹಿಂದಿನ ಸಂಚಿಕೆಯಲ್ಲಿ ನೀವು ಲೂಕನ ಸುವಾರ್ತೆ 1 ಮತ್ತು 2ನೇ ಅಧ್ಯಾಯಗಳನ್ನು ಓದಿಕೊಳ್ಳಲು ತಿಳಿಸಿದ್ದೆನು. ನೀವೆಲ್ಲರೂ ಓದಿರುತ್ತೀರೆಂದು ನನ್ನ ಭಾವನೆ. ಮತ್ತಾಯ ಮತ್ತು ಮಾರ್ಕನ ಸುವಾರ್ತೆಯಲ್ಲಿಯೂ ಆತನ ಜೀವನ ಮತ್ತು ಬಾಲ್ಯದ ಬಗ್ಗೆ ಬರೆದಿದೆ.

ಆದಾಮ ಮತ್ತು ಹವ್ವಳು ದೇವರಿಗೆ ಅವಿಧೇಯರಾಗಿ ಪಾಪ ಮಾಡಿದಾಗ ದೇವರು ಸರ್ಪಕ್ಕೆ ಶಾಪ ಕೊಡುವಾಗ ಈ ರೀತಿ ಹೇಳುತ್ತಾನೆ:—"ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನ (ದ್ವೇಷ)ವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು; ನೀನು ಅದರ ಹಿಮ್ಮಡಿಯನ್ನು ಕಚ್ಚುವಿ." (ಆದಿ 3:15). ಇಲ್ಲಿ "ಸರ್ಪ"ವೆನ್ನುವಾಗ, ದೇವರಿಗೆ ವಿರುದ್ಧವಾದದ್ದನ್ನು ಮಾಡಿಸುವಂತಾದ್ದು ಅಥವಾ ಅಂಥಹ ಪ್ರೇರಣೆ ಎಂದು ಅರ್ಥ ಮಾಡಿಕೊಳ್ಳತಕ್ಕದ್ದು. ಸ್ತ್ರೀಯ ಸಂತಾನವೆನ್ನುವಾಗ ಕ್ರಿಸ್ತನೆಂದೂ ಸರ್ಪದ ತಲೆ ಎಂದಾಗ ಕೆಟ್ಟದ್ದಕ್ಕೆ ಮೂಲವಾದದ್ದನ್ನು ಎಂದೂ ಅರ್ಥ ಮಾಡಿಕೊಳ್ಳಬೇಕು. ಆಗ ಕ್ರಿಸ್ತನು ಕೆಟ್ಟದರ ಮೂಲವಾದದ್ದನ್ನು ಜಜ್ಜುತ್ತಾನೆ ಅಂದರೆ ಸಾಯಿಸುತ್ತಾನೆ ಅಂದರೆ ಅದರ ಕಾರ್ಯವು ಇನ್ನೆಂದಿಗೂ ನಡೆಯದಂತೆ ಮಾಡುತ್ತಾನೆ ಎಂದರ್ಥ. ಮುಂದೆ ಯೇಸುವಿನ ಜನನದ ಬಗ್ಗೆ ತಿಳಿಯೋಣ.

ಒಂದು ಮಗು ಹುಟ್ಟಿದಾಗ ಯಾವಾಗಲೂ ಅದೊಂದು ಸಂತೋಷಕರ ಹಾಗೂ ಉತ್ತೇಜಕರ ಕಾಲವಾಗಿರುತ್ತೆ. ಯೇಸುವು ಬೆತ್ಲೆಹೇಮಿನಲ್ಲಿ ಹುಟ್ಟಿದಾಗ ಆತನು ಎಂದಿಗೂ ಬಹು ಪ್ರಾಮುಖ್ಯವಾದ ಶಿಶುವಾಗಿದ್ದನು. ಯಾಕೆಂದರೆ ದೇವರು ವಾಗ್ದಾನ ಮಾಡಿದ ರಾಜನಾಗಿ ಆತನು ಬೆಳೆಯಬೇಕಿತ್ತು. ದೇವರು ತಾನು ವಾಗ್ದಾನ

ಮಾಡಿದ ರಾಜನನ್ನು ಕಳುಹಿಸುತ್ತಾನೆಂದು ಇಸ್ರಾಯೇಲಿನ ಜನರು ಬಹಳ ಕಾಲ ದಿಂದಲೂ ಕಾಯುತ್ತಿದ್ದರು.

ಅಂದು ಇಸ್ರಾಯೇಲ್ ದೇಶದಲ್ಲಿ ದೇವರನ್ನು ಪ್ರೀತಿಸಿ ಆತನಿಗೆ ವಿಧೇಯ ಳಾಗಿದ್ದ ಮೇರಿ ಎಂಬ ಹೆಸರಿನ ಒಬ್ಬ ಸುಂದರ ಸ್ತ್ರೀಯಿದ್ದಳು. ಮೇರಿಯನ್ನು ಬಹಳವಾಗಿ ಮೆಚ್ಚಿದ ದೇವರು ಎಂದೂ ಹುಟ್ಟದ ಒಂದು ವಿಶೇಷ ಮಗುವಿನ ತಾಯಿಯಾಗಲು ಆಕೆಯನ್ನು ಆರಿಸುತ್ತಾನೆ. ಆತನು ತನ್ನ ದೂತನಾದ ಗಬ್ರಿಯೇಲ ನನ್ನು ಒಂದು ಆಶ್ಚರ್ಯಕರವಾದ ಸಂದೇಶದೊಂದಿಗೆ ಮೇರಿಯ ಬಳಿಗೆ ಕಳುಹಿಸು ತ್ತಾನೆ. "ನೀನು ಒಬ್ಬ ಮಗನನ್ನು ಹೆರುವಿ, ಅವನನ್ನು ಯೇಸುವೆಂದು ಕರೆಯಬೇಕು. ಆತನು ಮಹಾಪುರುಷನಾಗುವನು ಮತ್ತು ದೇವರ ಮಗನೆನಿಸಿಕೊಳ್ಳುವನು."

ತನ್ನನ್ನು ಯೇಸುವಿನ ತಾಯಿಯಾಗಲು ದೇವರು ಆರಿಸಿಕೊಂಡಿದ್ದಾನೆಂಬ ಆಶ್ಚರ್ಯಕರವಾದ ಮಾತುಗಳನ್ನು ಕೇಳಿ ಮೇರಿಯು ಎಷ್ಟು ವಿಸ್ಮಿತಳಾಗಿರಬಹು ದೆಂಬುದನ್ನು ನೀವೇ ಊಹಿಸಿಕೊಳ್ಳಿ. ಆದರೆ ಮೇರಿಯು ಜೋಸೆಫನಿಗೆ ನಿಶ್ಚಿತಾರ್ಥ ಯಾಗಿದ್ದರೂ, ಪುರುಷನನ್ನರಿತವಳಲ್ಲವೆಂದು ದೂತನಿಗೆ ಹೇಳುತ್ತಾಳೆ. ಆ ದೂತನು ಮೇರಿಗೆ—ಪರಾತ್ಪರನ (ದೇವರ) ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು. ಆದುದರಿಂದ ಹುಟ್ಟುವಂತಾದ್ದು ದೇವರ ಮಗನೆನಿಸಿಕೊಳ್ಳುವದು" ಎಂದು ಹೇಳುತ್ತಾನೆ.

ಶಿಶುವಾದ ಯೇಸುವು ಹುಟ್ಟುವ ಸಮಯ ಹತ್ತಿರವಾದಾಗ, ಮೇರಿಯು ತನ್ನ ಪತಿಯಾದ ಜೋಸೆಫ್ ಜೊತೆಯಲ್ಲಿ ಬೆತ್ಲೆಹೇಂ ಎಂಬ ಊರಿಗೆ ದೂರದ ಪ್ರಯಾಣ ಮಾಡಬೇಕಾಗಿ ಬರುತ್ತದೆ. ಆ ದೇಶದ ಜನರನ್ನು ಅವರವರ ಕುಟುಂಬಗಳು ಬಂದ ಊರುಗಳಲ್ಲಿ ಎಣಿಕೆ ಮಾಡುತ್ತಿದ್ದರು. ಬೆತ್ಲೆಹೇಮು ಬಹುದೂರದ ಊರಾಗಿತ್ತು. ಮೇರಿ ಮತ್ತು ಜೋಸೆಫ್ ಅಲ್ಲಿಗೆ ಬಂದಾಗ ಬಹುದಣಿದಿದ್ದರು. ಆದರೆ ಇವರಿಗೆ ಮುಂಚಿತವಾಗಿಯೇ ಅನೇಕ ಜನರು ಆ ಊರಿಗೆ ಬಂದಿದ್ದ ಕಾರಣ ಇವರಿಗೆ ರಾತ್ರಿ ಇಳಿದುಕೊಂಡು ವಿಶ್ರಾಂತಿ ಪಡೆಯಲು ಎಲ್ಲಿಯೂ ಸ್ಥಳ ಸಿಗಲಿಲ್ಲ. ಏನೇನೋ ಪ್ರಯತ್ನಿಸಿದರು. ಛತ್ರಕ್ಕೆ ಹೋದರು. ಅಲ್ಲಿಯೂ ಅವರಿಗೆ ಸ್ಥಳ ಸಿಗಲಿಲ್ಲ. ಕಡೆಯಲ್ಲಿ ಅವರು ಪ್ರಾಣಿಗಳನ್ನು ಇಡುತ್ತಿದ್ದ ಕೊಟ್ಟಿಗೆಯಲ್ಲಿ ರಾತ್ರಿಯನ್ನು ಕಳೆದರು. ಅಲ್ಲಿ ಅದೇ ರಾತ್ರಿ ಮಗುವಾದ ಯೇಸುವು ಹುಟ್ಟಿದನು. ಆ ಪುಟ್ಟದಾದ ಮಗು ಹುಟ್ಟಲು ಎಂತಹ ಸ್ಥಳ! ಅಲ್ಲದೆ ಅಂತಹ ವಿಶೇಷ ಮಗು ಕೂಡ—ಯಾಕೆಂದರೆ ಆ ಮಗುವು ದೇವರ ಸ್ವಂತ ಮಗನಾಗಿದ್ದನು. ಆ ಮಗುವಿನ ತಾಯಿಯಾದ ಮೇರಿಯು ಆ ಮಗುವನ್ನು ಜೋಪಾನವಾಗಿ ಸುತ್ತಿ ಗೋದಲಿಯಲ್ಲಿ ಮಲಗಿಸಿದಳು. ಅವರಿಗೆ ಇಳಿದುಕೊಳ್ಳಲು ಬೇರೆ ಸರಿಯಾದ ಸ್ಥಳ ಸಿಗುವವರೆಗೂ ಅವಳು ಅದನ್ನು ನೋಡಿಕೊಂಡಳು.

ಆ ಊರಿನ ಒಂದು ಕೊಟ್ಟಿಗೆಯಲ್ಲಿ ಇಂತಹ ವಿಚಿತ್ರ ಸಂಗತಿಗಳು ಜರುಗುತ್ತಿದ್ದಾಗ, ಹೊರಗಡೆ ಹೊಲಗಳಲ್ಲಿ ಕುರುಬರು ಕುರಿಗಳನ್ನು ಕಾಯುತ್ತಿದ್ದರು. ಅದು ರಾತ್ರಿಯ ಸಮಯವಾಗಿತ್ತು. ಆದರೆ ಥಕ್ಕನೆ ಆಕಾಶದಲ್ಲಿ ಕಣ್ಣು ಕೋರೈಸುವ ಬೆಳಕು ಅವರ ಸುತ್ತಲೂ ಕಾಣಿಸಿಕೊಂಡಾಗ ಅವರು ಗಾಬರಿಯಾದರು. ಆಗ ದೇವರ ದೂತನೊಬ್ಬನು ಅವರಿಗೆ ಮಾತಾಡುವುದನ್ನು ಕೇಳಿಸಿಕೊಳ್ಳುತ್ತಾರೆ. "ಹೆದರಬೇಡಿರಿ ! ನಿಮಗೆ ಸಂತೋಷವನ್ನುಂಟುಮಾಡುವ ಒಂದು ಶುಭವಾರ್ತೆಯನ್ನು ಹೇಳಲು ನಾನು ಬಂದಿದ್ದೇನೆ. ಈ ದಿನ ದಾವೀದನೂರಾದ ಬೆತ್ಲೆಹೇಮಿನಲ್ಲಿ ಒಬ್ಬ ರಕ್ಷಕನು— ಕರ್ತನಾದ ಕ್ರಿಸ್ತನು ಹುಟ್ಟಿದ್ದಾನೆ" ಎಂದು ಹೇಳಿದನು. ಆ ದೂತನು ಹೇಳುವುದನ್ನು ಮುಗಿಸುವಷ್ಟರಲ್ಲಿಯೇ ಪರಲೋಕದಿಂದ ಅನೇಕ ದೂತರು ದೇವರನ್ನು ಕೊಂಡಾಡುತ್ತಾ ಹಾಡುವುದನ್ನು ಕೇಳಿಸಿಕೊಂಡರು. ಎಂತಹ ಅದ್ಭುತವಾದ ಶಬ್ದ ಮತ್ತು ಎಂತಹ ಆಶ್ಚರ್ಯಕರವಾದ ಸಂದೇಶವನ್ನು ದೇವರು ಆ ಕುರುಬರಿಗೆ ಹೊರಗಡೆ ಹೊಲಗಳಲ್ಲಿ ಆ ರಾತ್ರಿಯಲ್ಲಿ ಕೊಟ್ಟಿರುತ್ತಾನೆ ! ಆ ದೂತರು ಪರಲೋಕಕ್ಕೆ ಹಿಂತಿರುಗಿದಾಗ, ಈ ಕುರುಬರು ಒಬ್ಬರಿಗೊಬ್ಬರು ಹೇಗೆ ಮಾತಾಡಿಕೊಂಡಿರಬಹುದೆಂಬುದನ್ನು ಊಹಿಸಿ. ನಂತರ ಅವರು ಆ ಮಗುವನ್ನು ಕಂಡುಕೊಳ್ಳಲು ದಾವೀದನೂರೆಂದು ಕರೆಯಲ್ಪಡುತ್ತಿದ್ದ ಬೆತ್ಲೆಹೇಮಿಗೆ ಹೋಗಲು ನಿರ್ಧರಿಸುತ್ತಾರೆ. ಆ ದೂತನು ಹೇಳಿದಂತೆಯೇ ಅವರು ಅಲ್ಲಿ ಒಂದು ಕೊಟ್ಟಿಗೆಯಲ್ಲಿ ಮೇರಿ ಮತ್ತು ಜೋಸೆಫನನ್ನೂ ಆ ಮಗುವನ್ನು ಗೋದಲಿಯಲ್ಲಿ ಮಲಗಿರುವುದನ್ನೂ ಕಾಣುತ್ತಾರೆ.

ಅವರು ಎಷ್ಟೊಂದು ಸಂತೋಷಭರಿತರಾಗಿದ್ದರೆಂದರೆ, ಅವರು ಅಲ್ಲಿಂದ ಹೊರಟು ತಮಗೆ ಸಿಕ್ಕಿದವರಿಗೆಲ್ಲಾ ತಾವು ನೋಡಿದ, ಕೇಳಿದ ಆಶ್ಚರ್ಯಕರ ಸಂಗತಿಗಳನ್ನು ಹೇಳುತ್ತಾ ಹೋದರು. ಕೊನೆಗೂ ದೇವರು ತಮಗೊಬ್ಬ ರಕ್ಷಕನನ್ನು ಒದಗಿಸಿಕೊಟ್ಟನೆಂದು ಅವರು ಆತನನ್ನು ಕೊಂಡಾಡುತ್ತಾ ತಮ್ಮ ಕುರಿಗಳನ್ನು ಕಾಯಲು ಹಿಂದಿರುಗಿದರು.

ದೇವರು ತನ್ನ ಮಗನಾದ ಯೇಸುವನ್ನು ನಮಗೆ ರಕ್ಷಕನಾಗಿ ಒದಗಿಸಿದ್ದಕ್ಕಾಗಿ ನಾವೂ ಕೂಡ ಸಂತೋಷಪಡುತ್ತೇವೆ. ಯಾಕೆಂದರೆ ದೇವರನ್ನು ಪ್ರೀತಿಸಬೇಕೆಂದು ಆತನು ಬೋಧಿಸುತ್ತಾನೆ. ನಾವು ಯೇಸುವನ್ನು ಪ್ರೀತಿಸಿದರೆ, ದೇವರು ನಮ್ಮನ್ನು ಪ್ರೀತಿಸುತ್ತಾನೆ.

—ಭಾ, ಚಂದುದಾಸ್.

ಭೂಲೋಕಕ್ಕೆ ಕ್ರಿಸ್ತನು ಬರುತ್ತಾನೆಯೇ ? ಇದನ್ನು ತಿಳಿಯಬೇಕಾದಲ್ಲಿ "ಭೂಲೋಕಕ್ಕೆ ಕ್ರಿಸ್ತನ ವಾಸ್ತವ ಹಿಂದಿರುಗುವಿಕೆ" ಎಂಬ ಉಚಿತ ಪುಸ್ತಕಕ್ಕೆ ಬರೆಯಿರಿ.

# ಮಕ್ಕಳ ದೀಪ - 5

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

(ಲೂಕ 1, 2 ಮತ್ತು 3ನೇ ಅಧ್ಯಾಯ ಹಾಗೂ ಮತ್ತಾಯ 3ನೇ ಅಧ್ಯಾಯವನ್ನು ನೋಡಿ).

1. "ಯೇಸು"ವೆಂಬ ಹೆಸರನ್ನಿಡಲು ಮರಿಯಳಿಗೆ ತಿಳಿಸಿದವರಾರು ?
2. ಯೇಸುವಿನ ಬಗ್ಗೆ ದೇವದೂತನು ಮರಿಯಳಿಗೆ ಹೇಳಿದ ಮಾತುಗಳಾವುವು ?
3. ಮರಿಯಳು ಗರ್ಭಿಣಿಯಾದದ್ದು ಹೇಗೆ ?
4. ನಂತರ ಮರಿಯಳು ಯಾರ ಮನೆಗೆ ಹೋದಳು ?
5. ಯೇಸು ಹುಟ್ಟಿದ್ದು ಯಾವ ಸ್ಥಳದಲ್ಲಿ ಮತ್ತು ಯಾವ ಊರಿನಲ್ಲಿ ?
6. ಕುರುಬರು ಕೇಳಿಸಿಕೊಂಡ ಪರಲೋಕ ಸೈನ್ಯದ ಹಾಡು ಯಾವುದು ?
7. ಯೇಸುವನ್ನು ನೋಡಲು ಎಷ್ಟು ಜನ ಜೋಯಿಸರು ಬಂದರು ?
8. ಕ್ರಿಸ್ತನನ್ನು ನೋಡದೇ ಸಾಯುವುದಿಲ್ಲವೆಂದು ಪವಿತ್ರಾತ್ಮನಿಂದ ತಿಳಿಸಲ್ಪಟ್ಟ ಹಾಗೂ ಕ್ರಿಸ್ತನಿಗಾಗಿ ಕಾಯುತ್ತಿದ್ದ ದೇವಭಕ್ತನ ಹೆಸರೇನು ?
9. ಯೇಸುವು ಯಾರ ವಂಶದವನು ?
10. ಯೇಸುಕ್ರಿಸ್ತನು ಉಪದೇಶ ಮಾಡಲು ಪ್ರಾರಂಭಿಸಿದಾಗ ಎಷ್ಟು ವಯಸ್ಸಾಗಿತ್ತು ?

---

**ಸೂಚನೆ :** ಕೆಲವರು ತಮ್ಮ ವಿಳಾಸ ಬದಲಾವಣೆಯನ್ನು ಮತ್ತು ಸರಿಯಾದ ವಿಳಾಸವನ್ನು ತಿಳಿಸದೇ ಇದ್ದ ಕಾರಣ, "ಶುಭವಾರ್ತೆ" ಸಂಚಿಕೆಯು ಹಿಂದಕ್ಕೆ ಬರುತ್ತಿವೆ. ಆದ್ದರಿಂದ ನಿಮ್ಮ ವಿಳಾಸ ಬದಲಾವಣೆ/ಸರಿಯಾದ ವಿಳಾಸವನ್ನು ಕೂಡಲೇ ನಮಗೆ ತಿಳಿಸತಕ್ಕದ್ದು, ಪಿನ್‌ಕೋಡ್ ಬರೆಯಿರಿ.